14. ಮಂಗಳೂರು (17.10.92 ರಿಂದ 25.10.92ರವರೆಗೆ) ಪರಬ್ ಕೊಂಕಣಿ ಹಬ್ಬ

ಅನುಬಂಧ – 2

1. ಆಡಳಿತ ಭಾಷೆ ಕನ್ನಡಕ್ಕೆ ಪೂರಕವಾಗಿ ಅಧಿಕಾರಿಗಳ ಮತ್ತು ಸರ್ಕಾರದ ಆಡಳಿತ ಕನ್ನಡ ತರಬೇತಿ.
2. ವಾರಕ್ಕೆ ನಾಲ್ಕು ಕಚೇರಿಗಳಂತೆ ತಿಂಗಳಿಗೆ 16 ಕಚೇರಿಗಳಿಗೆ ಕಡಿಮೆ ಇಲ್ಲದಂತೆ ತನಿಖಾ ಭೇಟಿ.
3. ಜಿಲ್ಲಾ ಮಟ್ಟದ ಕಾರ್ಯಾಗಾರ ಸಮಾಲೋಚನಾ ಗೋಷ್ಠಿ
4. ಕೆ.ಡಿ.ಬಿ. ಸಭೆಯಲ್ಲಿ ಪ್ರಸ್ತಾಪ
5. ಪೂರಕ ಸಾಹಿತ್ಯ ವಿತರಣೆ
6. ಇಲಾಖೆಯಿಂದ ಪ್ರಕಟಿಸಿರುವ ಪುಸ್ತಕಗಳ ಮಾರಾಟ
7. ಜಿಲ್ಲಾಮಟ್ಟದ ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ
8. ಕನ್ನಡ ಬೆರಳಚ್ಚು ಯಂತ್ರಗಳ ವಿತರಣೆ
9. ನಿರುದ್ಯೋಗಿ ಬೆರಳಚ್ಚುಗಾರರಿಗೆ ಜಾಬ್ ಟೈಪಿಂಗ್ ಮಾಡಲು ಕನ್ನಡ ಬೆರಳಚ್ಚು ಯಂತ್ರ ಖರೀದಿಸಲು ಧನಸಹಾಯ
10. ಕನ್ನಡ ಸಂಘ ಸಂಸ್ಥೆಗಳಿಗೆ ಭೇಟಿ ಹಾಗೂ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ನಡೆಸುವುದು.

ಬೆಂಗಳೂರು ನಗರದಲ್ಲಿ ಸೀಮೆಎಣ್ಣೆ ಹಾಕರ್ಸ್ ಲೈಸೆನ್ಸ್‌ಗಳ ಸಂಖ್ಯೆ

506 (902): ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ನೀಡದ ಸೀಮೆಎಣ್ಣೆ ಹಾಕರ್ಸ್ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ?

ಆ. ಜನವರಿ 1992ರಿಂದ ಡಿಸೆಂಬರ್ 1992ರವರೆಗೆ ಬೆಂಗಳೂರು ನಗರದಲ್ಲಿ ಕಲಬೆರಕೆ ಮತ್ತು ಇತರ ಅಕ್ರಮಗಳ ಕಾರಣದಿಂದಾಗಿ ರದ್ದಾದ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ?

ಇ. ಈ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಹೊಸದಾಗಿ ನೀಡಿದ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ?

ಈ. ಬೆಂಗಳೂರು ನಗರದಲ್ಲಿರುವ ಒಟ್ಟು ಸೀಮೆ ಎಣ್ಣೆ ಪಡಿತರ ಚೀಟಿ ಹೊಂದಿದವರ ಸಂಖ್ಯೆ ಎಷ್ಟು ?

ಉ. 1993–94 ರ ಅವಧಿಯಲ್ಲಿ ಬೇಡಿಕೆಯನ್ನು ಪೂರೈಸಲು ನೀಡಲುದ್ದೇಶಿಸಿದ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. 581

ಆ. 03

ಇ. ಇಲ್ಲ

ಈ. 8,27,831

ಉ. ಇಲ್ಲ

ಉದ್ಯಮಗಳ ಮಾಲಿನ್ಯ ತಡೆಗಟ್ಟಲು ತೆಗೆದುಕೊಂಡ ಕ್ರಮಗಳು

507 (350): ಶ್ರೀ ಆರ್. ದಯಾನಂದ್‌ರಾವ್ (ಗಾಂಧಿನಗರ)

ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ, ಪರಿಸರ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಎಷ್ಟು ಮಾಲಿನ್ಯಕಾರಕ ಉದ್ದಿಮೆಗಳನ್ನು ಬೆಂಗಳೂರು ನಗರದಲ್ಲಿ ಪತ್ತೆ ಹಚ್ಚಲಾಗಿದೆ ?

2. ಈ ಉದ್ದಿಮೆಗಳಿಗೆ ಮಾಲಿನ್ಯ ತಡೆಗಟ್ಟಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

3. ಎಷ್ಟು ಉದ್ದಿಮೆಗಳಿಗೆ ಕಾನೂನು ರೀತ್ಯಾ ಮಾಲಿನ್ಯ ತಡೆಗಟ್ಟಲು ನೋಟಿಸು ಕೊಡಲಾಗಿದೆ ?

4. ಎಷ್ಟು ಹೆಚ್ಚು ಮಾಲಿನ್ಯಕಾರಕ ಉದ್ದಿಮೆಗಳನ್ನು ಮುಚ್ಚಿಸಲಾಗಿದೆ ?

ಶ್ರೀ ಎನ್. ಜಿ. ಹಾಲಪ್ಪ (ವಿಜ್ಞಾನ ಮತ್ತು ತಂತ್ರಕಲೆ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು):--

1. ಒಟ್ಟು 664.

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 ಮತ್ತು (ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ), 1981 ಕಾಯ್ದೆಗಳನ್ನು ಜಾರಿಗೊಳಿಸುತ್ತಿದೆ. ಈ ಉದ್ದಿಮೆಗಳು ಸೂಕ್ತ ಜಲ ಶುದ್ಧೀಕರಣ ಘಟಕಗಳನ್ನು ಮತ್ತು ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಿ ಹೊಗೆ ಮತ್ತು ಕಲುಷಿತ ನೀರನ್ನು ಮಂಡಳಿಯು ನಿಗದಿಪಡಿಸಿರುವ ಗುಣ ಮಾನಕಗಳಿಗ ಶುದ್ಧೀಕರಿಸುವಂತೆ ಒತ್ತಾಯಿಸುತ್ತಿದೆ. ಬೆಂಗಳೂರು ನಗರದಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) 1974 ಕಾಯ್ದೆಗಳನ್ನು ಉಲ್ಲಂಘಿಸಿದ ಕಾರಣ ಒಂದು ಕಾರ್ಖಾನೆಯ ವಿರುದ್ಧ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲಾಗಿದೆ. ಹಾಗೂ ಎರಡು ಅತಿ ಮಾಲಿನ್ಯಕಾರಕ ಉದ್ದಿಮೆಗಳನ್ನು ಮುಚ್ಚಲು ಸಪ ಆದೇಶ ನೀಡಲಾಗಿದೆ.

3.ಗುರುತಿಸಲಾದ ಎಲ್ಲಾ ಮಾಲಿನ್ಯಕಾರಕ ಕಾರ್ಖಾನೆಗಳಿಗೆ ನೋಟೀಸನ್ನು ನೀಡಲಾಗಿದ್ದು ಅವುಗಳು ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ಕಾಯ್ದೆಗಳನ್ವಯ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಲಾಗುತ್ತಿದೆ.

4. ಎರಡು.

ಹೊಸ ಪೋಲೀಸ್ ಠಾಣೆಗಳು ಮತ್ತು ಅದರ ಸಿಬ್ಬಂದಿ ವರ್ಗ.

509 (900): ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್‌ಕಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?